# 32

# “ತಂದೆಯೇ, ಕಾಲ ಬಂದಿದೆ”

## (17:1-26)

ಈ ಕೆಳಗಿನ ಪಾಠವು ಒಂದು ವಿಶೇಷವಾದ ಆರಾಧನೆಯಾಗಿದೆ, ಇದರಲ್ಲಿ ಪ್ರಸಂಗವು ಐದು ಭಾಗಗಳಲ್ಲಿ ಪ್ರಸಂಗಿಸಲ್ಪಡುತ್ತದೆ. ಮಧ್ಯದಲ್ಲಿ ಹಾಡುಗಳು ಮತ್ತು ಪ್ರಾರ್ಥನೆಗಳು ಇರುತ್ತವೆ. ಮೂಲ ಪಾಠವು ತಾನೇ ಒಂದು ಪ್ರಾರ್ಥನೆಯಾಗಿರುವಾಗ, ಅದನ್ನು ಪ್ರಸ್ತುತ ಪಡಿಸುಲು ಇದು ಪ್ರತ್ಯೇಕವಾಗಿ ಯೋಗ್ಯವಾದದ್ದಾಗಿದೆ.

---

ಸಂದೇಶ #1 - ನೀನು ಯಾಕೆ ಪ್ರಾರ್ಥಿಸಬೇಕು?
ಪರಿಶುದ್ಧ ಬರಹದ ವಚನ: ಯೋಹಾನ 17
ಸಂಗೀತ: “Worthy of Praise”

ಸಂದೇಶ # 2 - “ನಿನ್ನ ಮಗನನ್ನು ಮಹಿಮೆ ಪಡಿಸು”
ಸಂಗೀತ: “Glorify Thy Name”
ಪ್ರಾರ್ಥನೆ

ಸಂದೇಶ # 3 - “ನಾನು ಇತರಿಗೋಸ್ಕರ ಕೇಳಿಕೊಳ್ಳುತ್ತೇನೆ”
ಸಂಗೀತ: “In the Hour of Trial”

ಸಂದೇಶ # 4 - “ಇವರೂ ಒಂದಾಗಿರಬೇಕೆಂದು”
ಸಂಗೀತ: “Blest Be the Tie” (stanzas 1-4)
ಕರ್ತನ ಪ್ರಾರ್ಥನೆ
ಸಂಗೀತ: “Blest Be the Tie” (stanzas 5, 6)
ಕಾಣಿಕೆ

ಸಂದೇಶ # 5 - “ನಾನು ಅವರಿಗೆ ನಿನ್ನ ಹೆಸರನ್ನು ತಿಳಿಸಿದ್ದೇನೆ” (ಆಮಂತ್ರಣ)
ಸಂಗೀತ: “Yes, for Me He Careth”
ಸಂಗೀತ: “I Stand Amazed”
ಮುಕ್ತಾಯದ ಪ್ರಾರ್ಥನೆ

---

### ನೀನು ಏನನ್ನು ಪ್ರಾರ್ಥಿಸುವಿ?

ನೀನು ದೊಡ್ಡ ಒತ್ತಡದಲ್ಲಿದ್ದರೆ, ನೀನು ಏನೆಂದು ಪ್ರಾರ್ಥಿಸುವಿ? ನೀನು ನಾಳೆ ಸಾಯಲಿಕ್ಕಿದ್ದೀ ಎಂದು ತಿಳಿದಿದ್ದರೆ, ನೀನು ಏನೆಂದು ಪ್ರಾರ್ಥಿಸುವಿ? ನೀನು ನಿನ್ನ ನಿಕಟ ಸ್ನೇಹಿತನಿಂದ ನೋಯಿಸಲ್ಪಟ್ಟಿದ್ದರೆ, ನೀನು ಏನೆಂದು ಪ್ರಾರ್ಥಿಸುವಿ? ನೀವು ತಪ್ಪಾಗಿ ತಿಳಿದು ಕೊಳ್ಳಲ್ಪಟ್ಟಿದ್ದೀ ಎಂದು ಆಳವಾಗಿ ಭಾವಿಸಿದರೆ, ನಿನ್ನ ಸ್ವಂತ ಕುಟುಂಬದಿಂದಲೂ, ನೀನು ಏನೆಂದು ಪ್ರಾರ್ಥಿಸುವಿ?

ನೀನು ಈಗ ಬಂಧಿಸಲ್ಪಡಲಿಕ್ಕಿದ್ದರೆ, ನ್ಯಾಯ ವಿಚಾರಣೆಗೆ ಒಳಪಡಿಸುವದಾಗಿದ್ದರೆ ಮತ್ತು ಮರಣದಂಡನೆ ಹೊಂದಬೇಕಾಗಿದ್ದರೆ, ನೀನು ಏನೆಂದು ಪ್ರಾರ್ಥಿಸುವಿ?

ನೋವು ಮತ್ತು ಒತ್ತಡಗಳಿಗೆ ನಮ್ಮನ್ನು ಸ್ವಾರ್ಥಿಗಳನ್ನಾಗಿ ಮಾಡುವ ಮಾರ್ಗವಿರುತ್ತದೆ. ನಮಗೆ ನೋವಾಗುವಾಗ ಇಲ್ಲವೇ ಭಯಗೊಂಡಾಗ, ಬೇರೆ ಯಾರ ಬಗೆಗಾದರೂ ಯೋಚಿಸಲು ನಮಗೆ ಕಠಿಣವಾದದ್ದಾಗುತ್ತದೆ. ಅದು ಯೋಹಾನ 17ರಲ್ಲಿ ಯೇಸುವಿನ ಪ್ರಾರ್ಥನೆಯನ್ನು ಅಷ್ಟು ಗಮನಾರ್ಹವಾದದ್ದನ್ನಾಗಿ ಮಾಡುವದರ ಭಾಗವಾಗಿರುತ್ತದೆ. ಶಿಲುಬೆಯ ಮೇಲಿನ ಆತನ ಮರಣಕ್ಕಿಂತ ಮೊದಲಿನ ರಾತ್ರಿಯಲ್ಲಿ, ತನ್ನ ಶಿಷ್ಯರೊಂದಿಗೆ ಕೊನೆಯ ಭೋಜನ ಮಾಡಿದ ನಂತರ ಮತ್ತು ಎಣ್ಣೆಮರಗಳ ಬೆಟ್ಟದಲ್ಲಿ ಆತನು ಬಂದಿಸಲ್ಪಡುವದಕ್ಕಿಂತ ಮೊದಲು ಯೇಸುವು ಈ ಅಗ್ರಾಹ್ಯವಾದ ಪ್ರಾರ್ಥನೆಯನ್ನು ಪ್ರಾರ್ಥಿಸಿದನು. ಇಂದು ಕೆಲವರು ಈ ಪ್ರಾರ್ಥನೆಯನ್ನು ಅದರ ಸೌಂದರ್ಯ ಮತ್ತು ಬಲದ ಕಾರಣದಿಂದ "ಕರ್ತನ ಪ್ರಾರ್ಥನೆ"[1] ಎಂದು ಕರೆಯಬೇಕೆಂದು ಒತ್ತಾಯಿಸುತ್ತಾರೆ. ನಾವು ಅದನ್ನು ಓದುವ ಪ್ರತೀ ಸಲ ಅದು ಆಶ್ಚರ್ಯಕರವಾದದ್ದಾಗಿರುತ್ತದೆ; ತನ್ನ ಯಾತನೆಯ ತಾಸಿನಲ್ಲಿ, ಯೇಸುವು ನಮಗಾಗಿ ಪ್ರಾರ್ಥಿಸಿದನು!

## "ನಿನ್ನ ಮಗನನ್ನು ಮಹಿಮೆ ಪಡಿಸು" (17:1-5)

"ತಂದೆಯೇ, ಕಾಲ ಬಂದಿದೆ" (17:1) ಎಂಬ ಮಾತುಗಳಿಂದ ಯೇಸುವು ತನ್ನ ಪ್ರಾರ್ಥನೆಯನ್ನು ಪ್ರಾರಂಭಿಸಿದನು. ಈ ಸುವಾರ್ತೆಯಲೆಲ್ಲಾ ಸಮಯವು ಒಂದು ಪ್ರಮುಖ ವಿಷಯವಾಗಿದೆ. "ನನ್ನ ಸಮಯವು ಇನ್ನೂ ಬಂದಿರುವದಿಲ್ಲ"[2] ಎಂದು ಯೇಸುವು ತನ್ನ ತಾಯಿಗೂ, ತನ್ನ ಶಿಷ್ಯರಿಗೂ ಪುನಃ ಪುನಃ ಹೇಳಿದನು. ಆದರೆ ಈ ಅಧ್ಯಾಯದಲ್ಲಿ ವಿವರಿಸಿದ ಸಾಯಂಕಾಲದಲ್ಲಿ "ಕಾಲ ಬಂದಿದೆ" ಎಂದು ಯೇಸು ಹೇಳುತ್ತಿದ್ದನು. ಇದರ ಅರ್ಥವೇನೆಂಬುದರ ಬಗ್ಗೆ ನಿಶ್ಚಯವಾಗಿ ಶಿಷ್ಯರು ಹೆಚ್ಚಾಗಿ ಗಲಿಬಿಲಿಗೊಂಡಿದ್ದರು, ಆದರೆ ನೀನು ಮತ್ತು ನಾನು, ಯೇಸುವಿಗೆ ಅದು ಶಿಲುಬೆಯ ಮೇಲೆ ಸಾಯುವದಕ್ಕೆ ಸಮಯ ಎಂದರ್ಥವಾಗಿತ್ತೆಂದು ನೋಡುತ್ತೇವೆ.

ಯೇಸು ಆಗ, "ನಿನ್ನ ಮಗನನ್ನು ಮಹಿಮೆಪಡಿಸು, ಆಗ ಮಗನು ನಿನ್ನನ್ನು ಮಹಿಮೆ ಪಡಿಸುವದಕ್ಕಾಗುವದು" ಎಂದು ಪ್ರಾರ್ಥಿಸಿದನು (17:1). ಇತರ ಅಧ್ಯಾಯಗಳಿಂದ ಪಾಠಗಳಲ್ಲಿ ನಾವು ನೋಡಿದಂತೆ, ಮಹಿಮೆಯು ವೈಯಕ್ತಿಕ ಆಕಾಕ್ಷೆಯನ್ನು, ಸಾಧನೆಯನ್ನು, ಗೌರವವನ್ನು, ಮತ್ತು ಕೀರ್ತಿಯನ್ನು ವಿವರಿಸಲು ಈ ಲೋಕದಲ್ಲಿ ಸಾಮಾನ್ಯವಾಗಿ ಉಪಯೋಗಿಸಲ್ಪಟ್ಟಿದೆ. ಹೀಗಿ ದ್ದರೂ, ಯೇಸುವಿನ ತುಟಿಗಳ ಮೇಲೆ "ಮಹಿಮೆಯು," "ದೀನತೆಯ ಸೇವೆ," ಮತ್ತು "ತ್ಯಾಗ" ಎಂದರ್ಥಕೊಡುತ್ತದೆ. ಕಲ್ವಾರಿಯಲ್ಲಿ ಆತನು ಸಾಯಬೇಕಾಗಿದ್ದರೂ ತನ್ನನ್ನು ತಂದೆಯು ಸಂಪೂರ್ಣವಾಗಿ ಉಪಯೋಗಿಸಬೇಕೆಂದು ಆತನು ಪ್ರಾರ್ಥಿಸುತ್ತಿದ್ದನು. ತಿರುಳಿನಲ್ಲಿ, ಯೇಸುವು "ತಂದೆಯೇ, ಈಗ ನನ್ನನ್ನು ಶಿಲುಬೆಗೆ ಹಾಕಲು ನಿನಗಾಗಿ ನಾನು ಸಿದ್ಧನಾಗಿದ್ದೇನೆ" ಎಂದು ಪ್ರಾರ್ಥಿಸುತ್ತಿದ್ದಾನೆ. ಆತನು ನಿಜವಾಗಿಯೂ ಹೇಳಿದ ರೀತಿಯು "ತಂದೆಯೇ ನೀನು ನನ್ನನ್ನು ಮಹಿಮೆ ಪಡಿಸು" ಎಂಬುದಾಗಿತ್ತು.

ಯೇಸುವು "ಮಹಿಮೆಯ" ಬಗ್ಗೆ ಮಾತಾಡಿದಾಗ, ಆತನು ತಾನು ಏನನ್ನು ಹೇಳುತ್ತಿದ್ದೇನೆಂಬುದನ್ನು ತಿಳಿದಿದ್ದನು. "ಜಗದುತ್ಪತ್ತಿಗಿಂತ ಮೊದಲು" ತಂದೆಯೊಂದಿಗೆ ಆತನು ಅನುಭವಿಸಿದ ಮಹಿಮೆಯನ್ನು ಆತನು ಜ್ಞಾಪಿಸಿಕೊಂಡನು (17:5). ಮತ್ತು ಆತನು ತನ್ನ ತಂದೆಯ ಬಳಿಗೆ ಹಿಂದಿರುಗಿ ಹೋದಾಗ ಆ ಮಹಿಮೆಯು ಪುನಃ ತನ್ನದಾಗುವದೆಂಬುದನ್ನು ಸಹ ಆತನು ತಿಳಿದಿದ್ದನು. ಅದರ ಪರಿಣಾಮವಾಗಿ, ಪರಲೋಕವು ಮತ್ತು ಶಿಲುಬೆಯು, "ನಿನ್ನ ಮಗನನ್ನು ಮಹಿಮೆ ಪಡಿಸು" ಎಂದು ಪ್ರಾರ್ಥಿಸಿದಾಗ ಯೇಸುವಿನ ಮನಸ್ಸಿನಲ್ಲಿತ್ತು.

## "ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ" (17:6-19)

ಪ್ರಾರ್ಥನೆಯಲ್ಲಿ ಈ ಹಂತದಲ್ಲಿ, ಯೇಸುವಿನ ಗಮನವು ಆತನ ಶಿಷ್ಯರ ಕಡೆಗೆ ತಿರುಗಿತು.

ಬೇರೆ ಇತರ ವಿಷಯಗಳಿಗಿಂತಲೂ ಹೆಚ್ಚಾಗಿ ಶಿಷ್ಯರ ಬಗ್ಗೆ ಈ ಪ್ರಾರ್ಥನೆಯಲ್ಲಿ ಹೇಳಲ್ಪಟ್ಟಿದೆ. ಇಲ್ಲಿ ಯೇಸುವು ತನ್ನ ಅತಿಯಾದ ವೇದನೆಯ ತಾಸಿನಲ್ಲಿ, ತನ್ನ ಸ್ವಂತ ತೊಂದರೆಗಿಂತ ಹೆಚ್ಚಾಗಿ ಇತರರಿಗಾಗಿ ಯೋಚಿಸಿದನು ಎಂಬ ಆಶ್ಚರ್ಯಕರವಾದ ಪ್ರದರ್ಶನವನ್ನು ನಾವು ನೋಡುತ್ತೇವೆ. ತಾನು ಎದುರಿಸಬೇಕಾದದ್ದನ್ನು ಆತನು ತಿಳಿದವನಾಗಿ, ಆತನು ಅವರಿಗಾಗಿ ಪ್ರಾರ್ಥಿಸಿದನು.

ಯೇಸುವಿಗೆ ಆತನ ಸೇವೆಯಲ್ಲಿ ತಂದೆಯು ಶಿಷ್ಯರನ್ನು ಕೊಟ್ಟಿದ್ದನು. ಯೇಸುವು ಪ್ರಾರ್ಥಿಸಿದಂತೆ, ಆತನು ತನ್ನ ತಂದೆಗೆ ಅವರನ್ನು ಹಿಂದಿರುಗಿ ಕೊಡುವೆನೆಂದೂ, ತನ್ನ ತಂದೆಯು ಅವರು ಕಲಿಯಬೇಕೆಂದು ಬಯಸಿದ್ದನ್ನು ಅವರಿಗೆ ತಾನು ಕಲಿಸುರುವೆನೆಂದೂ ಹೇಳಿದನು. ಆಗ ಆತನು "ಅವರಿಗಾಗಿ ಪ್ರಾರ್ಥಿಸಿದನು" (17:9). "ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು" ಎಂದು ಯೇಸು ಹೇಳಿದಂತೆ ಅವರ ಜೋಪಾಸನೆ ಮಾಡ ಬೇಕೆಂದು ತಂದೆಯನ್ನು ಕೇಳಿಕೊಂಡನು (17:11). ಈ ಪ್ರಾರ್ಥನೆಯಲ್ಲಿ ಯೇಸುವಿನ ಕೇಂದ್ರ ಚಿಂತನೆಯು ಶಿಷ್ಯರು "ಒಂದಾಗಿರುವುದು" ಆಗಿತ್ತು. ಮೊದಲು ಈ ಒಂದಾಗುವಿಕೆಯ ಉದ್ದೇಶವು ಸ್ಪಷ್ಟವಾಗಿರಲಿಲ್ಲ, ಆದರೆ ಅನಂತರದಲ್ಲಿ ಆತನು ಶಿಷ್ಯರು ಒಬ್ಬರೊಂದಿಗೊಬ್ಬರು ಅಷ್ಟೇ ಅಲ್ಲ, ಆದರೆ ತನ್ನೊಂದಿಗೂ ಮತ್ತು ತಂದೆಯೊಂದಿಗೂ ಒಂದಾಗಿರಬೇಕೆಂದು ಸ್ಪಷ್ಟವಾ ಗುತ್ತದೆ, "ಒಂದಾಗಿರುವಿಕೆಯು" ಅದ್ಭುತಕರವಾದ ಬೈಬಲಿನ ತತ್ವವಾಗಿದ್ದು, ಅದರ ಮೂಲವು ಆದಾಯ ಮತ್ತು ಹವ್ವರ ಕಥೆಯಲ್ಲಿರುತ್ತದೆ (ಆದಿಕಾಂಡ 2:24), ಮತ್ತು ಕ್ರೈಸ್ತರ ಒಬ್ಬರಿಗೊಬ್ಬರು ಹಾಗೂ ನಮ್ಮ ದೇವರೊಂದಿಗೆ ಸಂಬಂಧಿಸುವ ಮಾರ್ಗವನ್ನು ವಿವರಿಸುತ್ತದೆ.

ಅನಂತರ, ಯೇಸುವು ಶಿಷ್ಯರಿಗಾಗಿ ಪ್ರಾರ್ಥಿಸಿದನು, ಯಾಕಂದರೆ ಆತನು ಅವರನ್ನು ಲೋಕದಲ್ಲಿ ಬಿಟ್ಟು ಹೋಗ ಬೇಕಾಗಿತ್ತು. ಈ ಪ್ರಾರ್ಥನೆಯಲೆಲ್ಲಾ ಆತನ ಶಿಷ್ಯರ ಮತ್ತು ಜಗತ್ತಿನ ಮಧ್ಯದಲ್ಲಿ ಮನೋಹರವಾದ ಸಂಬಂಧವನ್ನು ನಾವು ನೋಡುತ್ತೇವೆ.

> … ಲೋಕದೊಳಗಿಂದ ನೀನು ನನಗೆ ಕೊಟ್ಟ ಮನುಷ್ಯರಿಗೆ … (ವಚನ 6).
>
> … ಇವರು ಲೋಕದಲ್ಲಿ ಇರುತ್ತಾರೆ … (ವಚನ 11).
>
> … ಲೋಕದಲ್ಲಿದ್ದು ಈ ಮಾತುಗಳನ್ನು ಆಡುತ್ತೇನೆ … (ವಚನ 13).
>
> … ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ … (ವಚನ 14).
>
> ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿ ಕೊಳ್ಳುವದಿಲ್ಲ (ವಚನ 15).
>
> ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ (ವಚನ 16).
>
> ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಇವರನ್ನೂ ಲೋಕಕ್ಕೆ ಕಳಹಿಸಿಕೊಟ್ಟೆನು (ವಚನ 18).

ಯೇಸುವಿಗೆ ತನ್ನ ಶಿಷ್ಯರಿಗಾಗಿ ಬಹಳ ಚಿಂತೆಯುಳ್ಳವನಾಗಿದ್ದನು. ಯಾಕಂದರೆ ಆತನು ಅವರೊಂದಿಗೆ ಇನ್ನು ಮುಂದೆ ಇರದಿದ್ದರೂ ಅವರು ಲೋಕದಲ್ಲಿ ಉಳಿದುಕೊಳ್ಳುವವರಾಗಿದ್ದರು. ಅವರು ಲೋಕದಲ್ಲಿ ಇರುವಾಗ, ಅವರು ಈ ಲೋಕದ ಭಾಗವಾಗಿರುವದಿಲ್ಲ. ಅವರ ಸೇವೆಯ ಕಾರಣದಿಂದ, ಅವರು ಲೋಕದೊಳಗೆ ಕಳುಹಿಸಿಲ್ಪಡುವರು. ಲೋಕದೊಂದಿಗಿನ ಅವರ

ಸಂಬಂಧದ ಬಗ್ಗೆ ಯೇಸುವಿನ ಪ್ರಾರ್ಥನೆಯು 1 ಅರಸುಗಳು 19:4ರಲ್ಲಿಯ ಎಲೀಯನ ಪ್ರಾರ್ಥನೆಯನ್ನು ಮನಸ್ಸಿಗೆ ತರುತ್ತದೆ. ಎಲೀಯನು ತನ್ನ ಸೇವೆಯಲ್ಲಿಯ ಒಂದು ಪ್ರತ್ಯೇಕವಾದ ನಿರಾಶಾದಾಯಕವಾದ ಸಮಯದಲ್ಲಿ, ದೇವರು ತನ್ನ ಪ್ರಾಣವನ್ನು ತೆಗೆದು ಜಗತ್ತಿನಿಂದ ತನ್ನನ್ನು ತೆಗೆದು ಹಾಕಬೇಕೆಂದು ಪ್ರಾರ್ಥಿಸಿದ್ದನು. ದೇವರು ಎಲೀಯನ ಭಿನ್ನಹವನ್ನು ನಿರಾಕರಿಸಿದನು ಮತ್ತು ದೇವರ ಪ್ರವಾದನೆಯಂತೆ, ಜಗತ್ತಿನಲ್ಲಿ ಪುನಃ ಕೆಲಸ ಮಾಡುವಂತೆ ಆತನನ್ನು ಇಟ್ಟನು.

ತನ್ನ ಶಿಷ್ಯರಿಗಾಗಿದ್ದ ಯೇಸುವಿನ ಪ್ರಾರ್ಥನೆಯು ಇಂದು ಲೋಕದೊಂದಿಗೆ ನಮ್ಮ ಸಂಬಂಧವನ್ನು ವಿವರಿಸುತ್ತದೆ. ನಾವು ಲೋಕದಲ್ಲಿದ್ದರೂ, ನಾವು ಲೋಕದವರಲ್ಲ. ದೇವರ ಸೇವಕರಂತೆ, ನಮ್ಮ ಸೇವೆಯು ಆತನ ಸುವಾರ್ತೆಯೊಂದಿಗೆ ಲೋಕದೊಳಗೆ ಹೋಗುವುದಾಗಿದೆ. ಲೋಕದೊಂದಿಗಿನ ನಮ್ಮ ಸಂಬಂಧವು ಸಂಬಂಧವು ಸರಳವಾದ ಸಂಗತಿಯಾಗಿರುವದಿಲ್ಲ. ಆದರೆ ಯೇಸುವು ಶಿಲುಬೆಗೆ ಹಾಕಲ್ಪಡುವ ದಿನದ ಹಿಂದಿನ ಸಾಯಂಕಾಲದಲ್ಲಿಯ ಪ್ರಾರ್ಥನೆಯು ಈ ಕಠಿಣವಾದ ವಿಷಯವನ್ನು ಸ್ಪಷ್ಟಪಡಿಸುವದರಲ್ಲಿ ದೂರ ಹೋಗುತ್ತದೆ.

ತನಗೆ ಏನು ಸಂಭವಿಸಲಿಕ್ಕಿದೆ ಎಂಬುದನ್ನು ತಿಳಿದುಕೊಂಡು, ಯೇಸುವು ತನ್ನ ಅನುಯಾಯಿಗಳಿಗಾಗಿ ಪ್ರಾರ್ಥಿಸಿದನು ಯೇಸುವಿನ ಹೃದಯದ ಬಗ್ಗೆ ಅದು ನಮಗೆ ಏನನ್ನು ಹೇಳುತ್ತದೆ? ಇಂದು ಅದು ನಮಗಾಗಿ ಆತನ ಆಸಕ್ತಿಯ ಬಗ್ಗೆ ಏನನ್ನು ಹೇಳುತ್ತದೆ?

## “ಅವರೆಲ್ಲರೂ ಒಂದಾಗಿರಬೇಕೆಂದು” (17:20-24)

ವಚನ 20ರಿಂದ ಪ್ರಾರಂಭಿಸಿ, ಯೇಸುವು ಹನ್ನೆರಡು ಜನರಿಗಾಗಿ (ಈ ಹಂತದಲ್ಲಿ ಹನ್ನೊಂದು ಜನರಿಗಾಗಿ!) ತನ್ನ ಚಿಂತನೆಯನ್ನು ದಾಟಿ ಹೋಗಿ, “ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ” (17:20) ಪ್ರಾರ್ಥಿಸಿದನು. ಯೋಹಾನನ ಸುವಾರ್ತೆಯಲ್ಲಿ “ನಂಬು” ಎಂಬ ಪದದಿಂದ ದೂರ ಅಲೆಯುವಂತೆ ನಮಗೆ ಎಂದು ತೋರುವದಿಲ್ಲ ನಂಬಿಕೆಯು ಈ ಸುವಾರ್ತೆಯ ಉದ್ದೇಶವಾಗಿದೆ (20:30, 31) ಮತ್ತು ಯೇಸುವಿನ ಜೀವನದಲ್ಲೆಲ್ಲಾ ಆತನ ಹೃದಯದಲ್ಲಿ ಒಂದು ದೊಡ್ಡ ಚಿಂತನೆಯಾಗಿತ್ತು, ಶಿಷ್ಯರ ವಾಕ್ಯದ ಮುಖಾಂತರ ಯೇಸುವಿನಲ್ಲಿ ನಂಬಿಕೆಯಿಡುವರೊಳಗೆ ನಾವೂ ಒಳಗೊಂಡಿದ್ದೇವೆ! ತನ್ನ ಅತೀ ಅಂಧಕಾರದ ತಾಸಿನಲ್ಲಿ ಯೇಸುವು ನಿನಗಾಗಿ, ನನಗಾಗಿ ಪ್ರಾರ್ಥಿಸಿದನು!

ನಮಗಾಗಿ ಯೇಸುವಿನ ಪ್ರಾರ್ಥನೆಯು ನಾವು “ಒಂದಾಗಿರಬೇಕು” ಎಂಬುದಾಗಿದೆ. ಈ ಪ್ರಾರ್ಥನೆಯಲ್ಲಿ ನಾಲ್ಕು ಭಿನ್ನವಾದ ಸಲ ಯೇಸುವು ನಾವು “ಒಂದಾಗಿರಬೇಕೆಂದು” ಯೇಸುವು ಪ್ರಾರ್ಥಿಸಿದನು. “ಒಂದಾಗಿರುವುದು” ಅಂದರೆ ಕ್ರೈಸ್ತರು ಒಬ್ಬರಿಗೊಬ್ಬರು “ಹೊಂದಿಕೊಂಡು ಹೋಗಬೇಕು,” ಸಮಾಧಾನವನ್ನು ಅವರು ಅನುಭವಿಸಬೇಕು ಮತ್ತು ತೀಕ್ಷಣವಾದ ಹೋರಾಟಗಳಿರಬಾರದು ಎಂದರ್ಥವಾಗುತ್ತದೆಂದು ಕೆಲವರು ಯೋಚಿಸುತ್ತಾರೆ. ಹೀಗಿದ್ದರೂ, ಯೇಸುವು ಪ್ರಾರ್ಥಿಸಿದ ಒಂದಾಗಿರುವಿಕೆಯು ಇದಕ್ಕಿಂತಲೂ ಎಷ್ಟೋ ಹೆಚ್ಚಿನದಾಗಿದೆ. ನಿಜವಾದ ಒಂದಾಗಿರುವಿಕೆಯು ತಂದೆಯಂತೆ ಮತ್ತು ಕುಮಾರನಿಂದ ಪ್ರದರ್ಶಿಸಲ್ಪಟ್ಟಿದೆ (17:21). ತಂದೆಯು ಆತನೊಂದಿಗೆ ಒಂದಾಗಿದ್ದಂತೆ ಯೇಸುವು ನಮ್ಮೊಂದಿಗೆ ಒಂದಾಗಿರಲು ಬಯಸಿದನು (17:23). ಕ್ರೈಸ್ತ ಅನ್ಯೋನ್ಯತೆಯು ಅದನ್ನೇ ಮಾಡಿದ ಬೇರೆ ಪ್ರತಿಯೊಬ್ಬರೊಂದಿಗೆ ನಾವು ಒಂದಾಗುವ ತೀವ್ರವಾದ ರೀತಿಯಲ್ಲಿ, ಕುಮಾರನೊಂದಿಗೆ ಹಾಗೂ ತಂದೆಯೊಂದಿಗೆ ಐಕ್ಯತೆ ಹೊಂದುವದರಿಂದ ಬರುತ್ತದೆ. ಈ ದಿವಸಗಳಲ್ಲಿ ಕೆಲವು ಸಲ ಕೇಳಲ್ಪಡುತ್ತಿರುವ ಭಾಷೆಯನ್ನು ಉಪಯೋಗಿಸಲು, ಒಂದಾಗಿರುವಿಕೆಯು ತಂದೆ ಕುಮಾರ ಮತ್ತು ಪ್ರತಿಯೊಬ್ಬ ಕ್ರೈಸ್ತನನ್ನು ಒಳಗೊಂಡಿರುವ ಆತ್ಮಿಕವಾದ “ಗುಂಪು ತಬ್ಬಿಕೊಳ್ಳುವಿಕೆ” ಆಗಿದೆ.

ಯೇಸುವು ಪ್ರಾರ್ಥಿಸಿದ ಒಂದಾಗಿರುವಿಕೆಯು ಕುಟುಂಬ ಸಂಬಂಧಗಳಿಂದ

ಉದಾಹರಿಸಲ್ಪಡಬಹುದು. ಬಹಿರಂಗ ಹೋರಾಟವನ್ನು ಅನುಭವಿಸದ, ಆದರೆ ನಿಕಟತೆಯನ್ನೂ ಸಂಪರ್ಕವನ್ನೂ ಅನುಭವಿಸದ ಕುಟುಂಬವನ್ನು ಎಂದಾದರೂ ನೀವು ನೋಡಿರುವಿರೋ? ಅದಕ್ಕೆ ವಿರುದ್ಧವಾಗಿ, ನಿಕಟತೆಯನ್ನು ಸಂಪರ್ಕವನ್ನು ಬಹಳವಾಗಿ ಅನುಭವಿಸಿದ ಆದರೆ ಕಾಲಕಾಲಕ್ಕೆ ಅಸಮ್ಮತಿಗಳನ್ನೂ ಹೋರಾಟಗಳನ್ನೂ ಸಹಿಸಬಹುದಾಗಿದ್ದ ಕುಟುಂಬವನ್ನು ಎಂದಾರೂ ನೋಡಿದ್ದೀರೋ? ಯಾವ ಕುಂಟುಂಬವು ಹೆಚ್ಚಾಗಿ ಸಭೆಯಂತೆ ಇರುತ್ತದೆ. ಯಾವ ಕುಟುಂಬವು ಒಂದಾಗಿರುವದಕ್ಕೆ ಮಾದರಿಯಾಗಿರುತ್ತದೆ? ನಿಶ್ಚಯವಾಗಿಯೂ, ತಮ್ಮ ಹೋರಾಟಗಳಿದ್ದರೂ ಅತೀ ಹೆಚ್ಚು ನಿಕಟತೆಯಿಂದಿರುವ ಕುಟುಂಬ ಅಂಥದ್ದಾಗಿರುತ್ತದೆ, ಇದು ಇಂದು ಕ್ರೈಸ್ತರಂತೆ ನಮಗಿರಬೇಕೆಂದು ಯೇಸುವು ಪ್ರಾರ್ಥಿಸಿದ ಸಂಬಂಧದ ರೀತಿಯಾಗಿದೆಯೆಂದು ನಾನು ನಂಬುತ್ತೇನೆ.

ನಾವು ಕರ್ತನ ಮೇಜಿನ ಸುತ್ತ ಕೂಡಿ ಬರುವಾಗ ನಾವು ಕ್ರಿಸ್ತನಲ್ಲಿ ನಮಗಿರುವ ಒಂದಾಗಿರುವಿಕೆಯನ್ನು ಆಚರಿಸುತ್ತೇವೆ. ನಮ್ಮ ಒಂದಾಗಿರುವಿಕೆಯು ನಿಶ್ಚಯವಾಗಿ ಪರಿಪೂರ್ಣವಾದದ್ದಾಗಿರುವದಿಲ್ಲ, ಒಂದು ನಿಕಟತೆಯುಳ್ಳ ಕುಟುಂಬವು ಆಗಾಗ ಮಾಡುವಂತೆ ಕೆಲವು ಸಲ ನಾವು ಜಗಳಾಡುತ್ತೇವೆ. ಹಾಗಿದ್ದರೂ, ನಾವು ಒಬ್ಬರಿಗೊಬ್ಬರು ಒಪ್ಪಿಕೊಂಡಿರುತ್ತೇವೆ. ಒಬ್ಬರನ್ನೊಬ್ಬರು ಪ್ರೀತಿಸುತ್ತೇವೆ ಮತ್ತು ನಾವು ತಂದೆಯಲ್ಲಿ ಹಾಗೂ ಕುಮಾರನಲ್ಲಿ ಒಂದಾಗಿರುತ್ತೇವೆ. ಕರ್ತನ ಭೋಜನದಲ್ಲಿ ನಾವು ಶಿಲುಬೆಗೆ ಹಿಂದಿರುಗುತ್ತೇವೆ. ಅಲ್ಲಿ ನಾವು ಯೇಸುವಿನೊಂದಿಗೆ ಹೆಚ್ಚು "ಒಂದಾಗಿ" ತಂದೆಯೊಂದಿಗೆ ಹೆಚ್ಚು "ಒಂದಾಗಿ," ಮತ್ತು ಸಭೆಯಲ್ಲಿಯ ನಮ್ಮ ಸಹೋದರರೊಂದಿಗೆ ಹಾಗೂ ಸಹೋದರಿಯರೊಂದಿಗೆ ಹೆಚ್ಚು "ಒಂದಾಗಿ" ನಮ್ಮನ್ನು ಕಂಡು ಕೊಳ್ಳುತ್ತೇವೆ.

## "ನಾನು ನಿನ್ನ ಹೆಸರನ್ನು ತಿಳಿಸಿದ್ದೇನೆ" (17:25, 26)

ಯೇಸುವಿನ ಪ್ರಾರ್ಥನೆಯ ಮುಕ್ತಾಯದಲ್ಲಿ ಆತನು ಪುನಃ ತನ್ನ ತಂದೆಯನ್ನು ಹೆಸರಿನಿಂದ ಸಂಬೋಧಿಸಿದ್ದಾನೆ (17:25). ಲೋಕವು ತಂದೆಯನ್ನು ತಿಳಿದಿರಲಿಲ್ಲವೆಂಬ ಸಂಗತಿಯನ್ನು ಆತನು ಹೇಳಿದ್ದಾನೆ, ಆದರೆ ಯೇಸುವು ಆತನನ್ನು ತಿಳಿದಿದ್ದಾನೆ. ತನ್ನ ಸೇವೆಯ ಕಾರಣದಿಂದ, ಶಿಷ್ಯರು ತಂದೆಯು ಕುಮಾರನನ್ನು ಕಳುಹಿಸಿದ್ದಾನೆಂಬುದನ್ನು ತಿಳಿದುಕೊಂಡಿದ್ದಾರೆಂದು ಆತನು ಹೇಳಿದನು (14:26). "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (14:9) ಎಂದು ಈ ಮೊದಲು ಯೇಸುವು ಫಿಲಿಪ್ಪನಿಗೆ ಹೇಳಿದ್ದನು. ನಾವು ಅಧ್ಯಯನ ಮಾಡುತ್ತಿರುವ ಪ್ರಾರ್ಥನೆಗಿಂತ ಮೊದಲು, ಶಿಷ್ಯರು ಯೇಸುವಿಗೆ, "ನಿನ್ನನ್ನು ದೇವರ ಬಳಿಯಿಂದ ಬಂದವನೆಂದು ನಂಬುತ್ತೇವೆ" (16:30) ಎಂದು ಹೇಳಿದ್ದರು.

ಹೀಗೆ ತಂದೆಯ ತಿಳುವಳಿಕೆಯು ಯೇಸುವಿನಿಂದ ಶಿಷ್ಯರಿಗೆ ವರ್ಗಾಯಿಸಲ್ಪಟ್ಟಿತು. ಯೇಸುವಿನ ಅಂತಿಮ ಪ್ರಾರ್ಥನೆಯು ಕುಮಾರನಿಗಾಗಿ ತಂದೆಯ ಪ್ರೀತಿಯು ಯೇಸುವಿನಿಂದ ಶಿಷ್ಯರಿಗೆ ವರ್ಗಾಯಿಸಲ್ಪಡಬಹುದೆಂಬುದಾಗಿದೆ. ತಂದೆಯಿಂದ ಕುಮಾರನಿಗೆ, ಶಿಷ್ಯರಿಗೆ ಮತ್ತು ಅಂತಿಮವಾಗಿ ಎಲ್ಲಾ ಜಗತ್ತಿಗೆ ಸುವಾರ್ತೆಯ ಪ್ರಸಾರಣೆಯು ಶಿಲುಬೆಗಿಂತ ಮೊದಲಿನ ರಾತ್ರಿ ಯೇಸುವು ಪ್ರಾರ್ಥಿಸಿದ್ದಕ್ಕಾಗಿತ್ತು. ಆ ಸಾಯಂಕಾಲ ಅದು ಆತನ ಹೃದಯದ ಮೇಲೆ ಭಾರವಾಗಿ ತೂಗಿತ್ತು, ಮತ್ತು ಅದು ನಿಶ್ಚಯವಾಗಿಯೂ ಇಂದು ಆತನ ಹೃದಯದ ಮೇಲಿರುತ್ತದೆ. ತಂದೆಯೊಂದಿಗೆ "ಒಂದಾಗಿರುವದರ" ಆನಂದವನ್ನು ಕುಮಾರನು ತಿಳಿದಿರುವನು, ಮತ್ತು ತಂದೆಯೊಂದಿಗೂ ಕುಮಾರನೊಂದಿಗೂ "ಒಂದಾಗಿರುವದರ" ಆನಂದವನ್ನು ಇಡೀ ಜಗತ್ತು ತಿಳಿಯಬೇಕೆಂದು ಆತನು ಬಯಸುತ್ತಾನೆ.

ಟಿಪ್ಪಣಿಗಳು

[1]ಮತ್ತಾಯ 6:9-13ರಲ್ಲಿ ಕಂಡು ಬರುವ ಮಾದರಿ ಪ್ರಾರ್ಥನೆಯು "ಕರ್ತನ ಪ್ರಾರ್ಥನೆ" ಎಂದು ಹೆಚ್ಚು ಸಾಮಾನ್ಯವಾಗಿ ಕರೆಯಲ್ಪಟ್ಟಿದ್ದಾಗಿದೆ. [2]2:4; 7:6, 8, 30. ಅನಂತರದಲ್ಲಿ ಆತನು ತನ್ನ ತಾಸು ಹೇಗೆ ಬಂದಿದೆ ಎಂಬುದನ್ನು ಮಾತಾಡಲು ಪ್ರಾರಂಭಿಸಿದನು: 12:23, 27; 13:1; 16:32.